Reg. No. [ | | | | | | | | | ]

**BASKAL 153/BSWKAL 153**

ಗುಣಾಂಕ ಆಧಾರಿತ ಎರಡನೇಯ ಚತುರ್ಮಾಸ ಬಿ.ಎ./ಬಿ.ಎಸ್.ಡಬ್ಲ್ಯೂ. ಪದವಿ

ಪರೀಕ್ಷೆ, ಮೇ/ಜೂನ್ 2016

ಕನ್ನಡ

ಕನ್ನಡ ಭಾಷಾ ಪತ್ರಿಕೆ – II

**(2013-2014 Batch Onwards)**

Time : 3 Hours                                                    Max. Marks : 80

ಭಾಗ – 1

(ಕಾವ್ಯ)

I. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ : **(1×8=8)**

1) ಪಂಪನ ಕಾವ್ಯದ ಹಿನ್ನೆಲೆಯಲ್ಲಿ ಭೀಷ್ಮನ ಪ್ರತಿಜ್ಞೆಯ ವಿಚಾರವನ್ನು ವಿವರಿಸಿರಿ.

2) ಜೇಡರ ದಾಸಿಮಯ್ಯನು ತನ್ನ ವಚನಗಳಲ್ಲಿ ಹೇಳುವ ವಿಚಾರವೇನು ? ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5=5)**

1) 'ತೆರೆದ ಬಾಗಿಲು' – ಕವನದ ಆಶಯವೇನು ? ಸಂಕ್ಷಿಪ್ತವಾಗಿ ತಿಳಿಸಿರಿ.

2) 'ದಯಾನದಿಯ ದಂಡೆಯಲ್ಲಿ' – ಕವನದ ಆಶಯವೇನು ? ಸಂಕ್ಷಿಪ್ತವಾಗಿ ತಿಳಿಸಿರಿ.

ಇ) ಎರಡರ ಟಿಪ್ಪಣಿ ಬರೆಯಿರಿ : **(2×3=6)**

1) ಚಂದ್ರಶೇಖರ ಕಂಬಾರ

2) ಕೆ.ಎಸ್. ನರಸಿಂಹಸ್ವಾಮಿ

3) ಟಿ.ಕೆ. ರಾಜಶೇಖರ.

II. ಅ) ಒಂದು ಪದ್ಯಭಾಗದ ಸಂದರ್ಭ ಸೂಚಿಸಿ ಭಾವಾರ್ಥವನ್ನು ವಿವರಿಸಿರಿ : **(1×5=5)**

1) ಬಂಡಣದೊಳೆನ್ನ ನೋಡಿಸಿ

ಕೊಂಡುಯ್ದಂ ನಿನ್ನನಾಸರಿತ್ಸುತನಾನುಂ

ಪೆಂಡತಿಯೆನಾದನೆದರಿಂ

ಪೆಂಡಿರ್ ಪೆಂಡಿರೊಳದೆಂತು ಬೆರಸುವರಬಲೇ ||

P.T.O.

2) ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದಡೆ
ವಿಷವೇರಿತಯ್ಯ ಆಪಾದ ಮಸ್ತಕಕ್ಕೆ
ಹಸಿವಿಗನ್ನವನಿಕ್ಕಿ ವಿಷವನಿಳುಹ ಬಲ್ಲಡೆ
ವಸುಧೆಯೊಳಗಾತನೇ ಗಾರುಡಿಗ ರಾಮನಾಥ.

ಆ) ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿವರಿಸಿರಿ: **(2×3=6)**

1) ದಯಾ ನದಿಯ ತುಂಬ ಕಣ್ಣೀರ ಮಹಾಪೂರ
2) ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ
3) ತತ್ಕನ್ಯಕೆ ಸಾಕ್ಷಿ ಬೇಡು ಪೊಡೆನೀವೆಮ್ಮಯ್ಯ ನಂಬೇಡಿರೇ.

III. ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪದ/ವಾಕ್ಯದಲ್ಲಿ ಉತ್ತರಿಸಿರಿ: **(5×1=5)**

1) ಪಂಪನ ಎರಡು ಕಾವ್ಯಗಳು ಯಾವುವು ?
2) ಮೈಸೂರು ಮಲ್ಲಿಗೆಯ ಕರ್ತೃ ಯಾರು ?
3) ಕನ್ನಡಕ್ಕೆ ಏಳನೇಯ ಜ್ಞಾನಪೀಠ ಪ್ರಶಸ್ತಿ ತಂದು ಕೊಟ್ಟ ಸಾಹಿತಿ ಯಾರು ?
4) 'ದಯಾನದಿಯ ದಂಡೆಯಲ್ಲಿ' – ಕವನದ ಕರ್ತೃ ಯಾರು ?
5) ಆದ್ಯ ವಚನಕಾರ ಎಂದು ಯಾರನ್ನು ಕರೆಯುತ್ತಾರೆ ?

## ಭಾಗ – 2

## (ಗದ್ಯ)

IV. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ: **(1×8=8)**

1) ಗಾಂಧೀವಾದದಿಂದ ಸ್ತ್ರೀವಾದವನ್ನು ತಿಳಿದುಕೊಳ್ಳುವ ಪ್ರಯತ್ನ ಪ್ರೀತಿ ಶುಭಚಂದ್ರರವರ ಲೇಖನದಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿರಿ.
2) ಸಾಮ ಜಾತಕದಲ್ಲಿ ಪ್ರತಿಪಾದಿತವಾದ ನಿಲುವೇನು ? ವಿವರಿಸಿರಿ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ: **(1×8=8)**

1) ನಮ್ಮ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಘಟನೆಗಳು "ಕ್ಷಣ ಹೊತ್ತು ಆಣಿ ಮುತ್ತು" ಲೇಖನದಲ್ಲಿ ಹೇಗೆ ಬಿಂಬಿತವಾಗಿದೆ ? ವಿವರಿಸಿರಿ.
2) ಗಂಗಾದರ್ಶನ ಮೂಡಿಸುವ ಜಿ.ಎಸ್. ಶಿವರುದ್ರಪ್ಪನವರ ಲೇಖನ ವೈಚಾರಿಕವೂ ಭಾವುಕವೂ ಆದ ಎರಡು ನೆಲೆಗಳನ್ನು ನಮ್ಮಲ್ಲಿ ಹೇಗೆ ಸೃಷ್ಟಿಸುತ್ತದೆ ? ವಿವರಿಸಿರಿ.

V. ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : (1×5=5)

1) ಚಮರಿಯ ಜೀವನವನ್ನು ಪರಿಚಯಿಸಿರಿ.

2) 'ಪ್ರತಿಭೆಯ ಹಿಂದಿದೆ ಪರಿಶ್ರಮ'–ಪ್ರಯತ್ನದಿಂದ ಪರಮಾರ್ಥ ಲೇಖನದ ಹಿನ್ನೆಲೆಯಲ್ಲಿ ಸಂಕ್ಷಿಪ್ತವಾಗಿ ಉತ್ತರಿಸಿರಿ.

VI. ಪ್ರತಿಯೊಂದು ಪ್ರಶ್ನೆಗೂ ಒಂದೊಂದು ಪದ/ವಾಕ್ಯದಲ್ಲಿ ಉತ್ತರಿಸಿರಿ : (4×1=4)

1) 'ಕುಮಾವು ನರಭಕ್ಷಕರು'–ಕೃತಿಯ ಲೇಖಕ ಯಾರು ?

2) 'ಬದುಕಲು ಕಲಿಯಿರಿ'–ಗ್ರಂಥದ ಲೇಖಕರು ಯಾರು ?

3) 'ಗಂಗೆಯ ಶಿಖರಗಳಲ್ಲಿ'–ಪ್ರವಾಸಕಥನದ ಲೇಖಕರು ಯಾರು ?

4) ಡಾ। ಎಂ. ವಿಜಯಭಾನು ಶೆಟ್ಟಿ ಕಾರ್ಕಳ ತಾಲೂಕಿನ ಯಾವ ಊರಿನವರು ?

## ಭಾಗ – 3
## (ನಾಟಕ)

VII. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ : (1×8=8)

1) "ಸಮಷ್ಟಿ ಹಿತಕ್ಕಾಗಿ ದುಷ್ಟ ನಿಗ್ರಹಕ್ಕೆ ಕೃಷ್ಣ ಪ್ರಜ್ಞೆಯು ಇಂದಿನ ಅಗತ್ಯ"–ಕಂಸಾಯಣ ನಾಟಕದ ಮೂಲಕ ವಿವರಿಸಿರಿ.

2) ಕೃಷ್ಣ, ಬಲರಾಮರು ಕಂಸನನ್ನು ಸಂಹರಿಸಿದ ವಿಚಾರವನ್ನು ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ : (1×6=6)

1) ಚಿಳ್ಳಂಗೋವಿ ಕೃಷ್ಣನಿಗೆ ಮಾರಿಬಲೆ ಸಿದ್ಧವಾದ ಬಗೆ ಹೇಗೆ ?

2) ವಸುದೇವ- ಕಂಸರ ನಡುವೆ ನಡೆದ ಸಂಭಾಷಣೆಯ ಸ್ವಾರಸ್ಯವೇನು ?

VIII. ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿವರಿಸಿರಿ : (2×2=4)

1) ಗೋವರ್ಧನ ಬೆಟ್ಟ ಯಃಕಶ್ಚಿತ್ ಛತ್ರಿಯಾಗಿ ಹೋಯ್ತು ....

2) ಪೂರ್ವದ ಕಿಟಕೀಲಿ ಹುಟ್ತಾನೆ .... ಪಶ್ಚಿಮದ ಕಿಟಕೀಲಿ ಮುಳುಗ್ತಾನೆ .....

3) ನಿನ್ನ ಮುಂದೆ ಹಾಡೋದು ಒಂದೇ ಕೋಣದ ಮುಂದೆ ಕಿಂದರೀ ಬಾರಿಸೋದು ಒಂದೇ.

IX. ಪ್ರತಿಯೊಂದು ಪ್ರಶ್ನೆಗೂ ಒಂದೊಂದು ಪದ/ ವಾಕ್ಯದಲ್ಲಿ ಉತ್ತರಿಸಿರಿ : (2×1=2)

1) 'ಕಂಸಾಯಣ' ನಾಟಕದ ನಾಟಕಕಾರನ ಹೆಸರೇನು ?

2) ಮಥುರಾವೀರ ಪ್ರಶಸ್ತಿ ಯಾರಿಗೆ ನೀಡಲ್ಪಟ್ಟಿತು ?

---